



ಏನನ್ನು? ಇಲ್ಲಿ ಎಲ್ಲಾ ಸಿಕ್ಕರೂ, ಊರಿನಲ್ಲಿರುವ ಅಪ್ಪ, ಅಮ್ಮ, ಸಹೋದರ, ಸಹೋದರಿಯರು, ನೆಂಟರಿಷ್ಟರು, ಬಾಲ್ಯಸ್ನೇಹಿತರು, ಊರಿನ ಮಳೆ, ಹವಾಗುಣ, ಪ್ರಕೃತಿ ಸಿಗುವುದಿಲ್ಲ. ಈ ವಿಷಯ ಮಾತ್ರ ಇಲ್ಲಿ ಕೆಲಸ ಮಾಡುವ ಎಲ್ಲರನ್ನೂ ಕೊರೆಯುತ್ತಿರುತ್ತದೆ. ಆದರೂ ಬೆಂಗಳೂರಿಗೆ ಇಲ್ಲಿಂದ ಮೂರೂವರೆ ಗಂಟೆಗಳ ವಿಮಾನ ಪ್ರಯಾಣ. ಹಾಗಾಗಿ ಯಾರಿಗಾದರೂ ಏನಾದರೂ ತುರ್ತು ಪರಿಸ್ಥಿತಿಯಿದ್ದರೆ ಇಲ್ಲಿ ತಿಂಡಿ ತಿಂದು ಹೊರಟರೆ, ಮಧ್ಯಾಹ್ನ ಊಟಕ್ಕೆ ಊರಿಗೆ ಸೇರಿಕೊಳ್ಳಬಹುದು. ಆದ್ದರಿಂದಲೇ ಒಂದೆರಡು ವರ್ಷ ಕೆಲಸ ಮಾಡಲೆಂದು ಬಂದವರು ಮೂವತ್ತು, ನಲವತ್ತು ವರ್ಷ ಕೆಲಸ ಮಾಡಿ, ಇಲ್ಲಿಯೇ ನಿವೃತ್ತರಾಗುತ್ತಾರೆ. ಇಲ್ಲಿನ ಜನರೂ ಕೂಡ ಬಹಳ ಶಾಂತಿಪ್ರಿಯರೂ ಹಾಗೂ ಕೋಮು ಸೌಹಾರ್ದವುಳ್ಳವರು. ಇದಕ್ಕೆಲ್ಲಾ ಕಾರಣ ಇಲ್ಲಿ ಐವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿ ಈ ದೇಶವನ್ನು ಸಂಪದ್ಭರಿತ ದೇಶವಾಗಿ ಮಾತ್ರವಲ್ಲದೆ, ಶಾಂತಿಪ್ರಿಯ ರಾಷ್ಟ್ರವನ್ನಾಗಿ ರೂಪಿಸಿದ ಕೀರ್ತಿ ದಿವಂಗತ ರಾಜರಾದ ಸುಲ್ತಾನ್ ಖಬೂಸ್‌ರವರಿಗೆ ಸಲ್ಲುತ್ತದೆ. ಅವರು ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಮಾಡಿ ಬಂದಿದ್ದರಿಂದಲೋ ಏನೋ ಅವರಿಗೆ ಭಾರತದವರನ್ನು ಕಂಡರೆ ಎಲ್ಲಿಲ್ಲದ ಪ್ರೀತಿ.

ನಾನು ಹೃದಯರೋಗ ತಜ್ಞನಾಗಿರುವುದರಿಂದ ದಿನನಿತ್ಯ ಹೃದಯಾಘಾತವಾಗಿ ಬರುವ ಹಲವು ರೋಗಿಗಳನ್ನು ನೋಡುತ್ತೇನೆ. ಇದರಲ್ಲಿ ಕೆಲವು ಅದೃಷ್ಟವಂತರು ಆಸ್ಪತ್ರೆಗೆ ಆರಾಮವಾಗಿ ನಡೆದುಕೊಂಡು ಬರುವಷ್ಟು ಸ್ಥಿರವಾಗಿರುತ್ತಾರೆ. ಕೆಲವು ದುರದೃಷ್ಟವಂತರು ಆಸ್ಪತ್ರೆಗೆ ಬರುವವರೆಗೂ ಚೆನ್ನಾಗಿದ್ದು, ಎಮರ್ಜೆನ್ಸಿ ವಿಭಾಗಕ್ಕೆ ಬರುತ್ತಲೇ ಹೃದಯಸ್ತಂಭನವಾಗಿ (ಹೃದಯ ಬಡಿತ ನಿಂತು), ಕೊನೆಗೆ ನಮ್ಮ ತಂಡದವರೆಲ್ಲಾ ಓಡಿಬಂದು ಉಳಿಸಬೇಕಾಗುತ್ತದೆ. ಕೆಲವರು ಸಾವಿನ ಕದ ಬಡಿದರೂ, ಪವಾಡದಂತೆ ಬದುಕಿಬಂದವರಿದ್ದಾರೆ. ಅಂತಹವರನ್ನು ಸಾವಿನ ದವಡೆಯಿಂದ ವಾಪಾಸ್ ಕರೆತರಲು ನಮ್ಮ ತಂಡ ಹರಸಾಹಸ ಮಾಡಬೇಕಾಗುತ್ತದೆ. ಅದು ನಿಜಕ್ಕೂ ನಮ್ಮ ಮತ್ತು ಯಮನ ನಡುವೆ ನಡೆಯುವ ಹಗ್ಗಜಗ್ಗಾಟವೇ ಸರಿ. ಕೆಲವು ಬಾರಿ ಯಮನ ಸೆಳೆತ ಬಹಳ ಜೋರಾಗಿದ್ದರೆ, ನಾವು ಕೈಚೆಲ್ಲಬೇಕಾಗುತ್ತದೆ. ಕೆಲವೊಮ್ಮೆ ಆತನಿಗೆ ಆಸಕ್ತಿಯಿಲ್ಲದ ಸಮಯದಲ್ಲಿ ನಮ್ಮನ್ನೇ ಗೆಲ್ಲಲು ಬಿಡುತ್ತಾನೆ. ನಮ್ಮ ಪ್ರಯತ್ನವಂತೂ ಎಲ್ಲಾ ಸಮಯದಲ್ಲೂ ಇದ್ದೇ ಇರುತ್ತದೆ. ಹೀಗೆ ನಾವು ತುಂಬ ಕಷ್ಟಪಟ್ಟು ಹೋರಾಡಿ ಉಳಿಸಿಕೊಂಡವರು ಬಹುಕಾಲ ನಮಗೆ ನೆನಪಿನಲ್ಲಿ ಉಳಿಯುತ್ತಾರೆ. ಅದರಲ್ಲಿ ಒಂದೆರಡು ಘಟನೆಗಳನ್ನು ನೆನಪಿಸಿಕೊಳ್ಳುವುದಾದರೆ: ಒಮ್ಮೆ ಇಲ್ಲೇ ನೆಲೆಸಿರುವ, ನಮ್ಮ ದೇಶದ ಪತ್ರಕರ್ತನೊಬ್ಬ ಸಮ್ಮೇಳನವೊಂದನ್ನು ವರದಿ ಮಾಡಲು ಹೋಗಿದ್ದಾಗ, ಆತನಿಗೆ ಹೃದಯಾಘಾತವಾಗಿ ನಮ್ಮ ಆಸ್ಪತ್ರೆಗೆ ಕರೆತಂದರು. ಆತನನ್ನು ಆಸ್ಪತ್ರೆಯ ಆವರಣದೊಳಗೆ ತರುವಷ್ಟರಲ್ಲಿ ಹೃದಯಸ್ತಂಭನವಾಗಿ ಹೃದಯ ನಿಂತುಹೋಗಿತ್ತು. ತಕ್ಷಣ 'ಕೋಡ್ ಬ್ಲೂ' (Code Blue) ಅನೌನ್ಸ್ ಮಾಡಲಾಯಿತು. (ಯಾವುದಾದರೂ ವ್ಯಕ್ತಿಗೆ/ರೋಗಿಗೆ ಹೃದಯ ಸ್ತಂಭನವಾದಾಗ Code Blue ಎಂದು ಆಸ್ಪತ್ರೆಯ ಮೈಕ್ ಸಿಸ್ಟಮ್‌ನಲ್ಲಿ ಅನೌನ್ಸ್ ಮಾಡುತ್ತಾರೆ. ತಕ್ಷಣ Code Blue ತಂಡದ ಸದಸ್ಯರಾದ ನಾವೆಲ್ಲಾ ಅಲ್ಲಿ ಹಾಜರಾಗಿ ಆ ಹೃದಯ ಸ್ತಂಭನವಾದ ವ್ಯಕ್ತಿಯನ್ನು ಬದುಕಿಸಲು ಪ್ರಯತ್ನಿಸುತ್ತೇವೆ. ನಮ್ಮ ತಂಡದಲ್ಲಿ ಮೂವರು ವೈದ್ಯರು ಮತ್ತು ನಾಲ್ವರು ನರ್ಸ್‌ಗಳಿರುತ್ತಾರೆ.) ತಕ್ಷಣ ಆತನಿಗೆ CPR (Cardio Pulmonary Resuscitation) ಶುರುಮಾಡಿದೆವು. ಅಂದರೆ ಎದೆಯನ್ನು ನಿಮಿಷಕ್ಕೆ 100ರಿಂದ 120 ಬಾರಿ ಒತ್ತುತ್ತಾ, ಆಮ್ಲಜನಕ ಕೊಡುತ್ತಾ, ಅಗತ್ಯವಾದ ಚುಚ್ಚುಮದ್ದುಗಳನ್ನು ಕೊಡುತ್ತಾ, ಆತನ ಹೃದಯಬಡಿತವನ್ನು ಪುನಃ ಪ್ರತಿಷ್ಠಾಪಿಸಲು ಪ್ರಯತ್ನಪಟ್ಟೆವು. ಆತನು ಆಸ್ಪತ್ರೆಯ ಹತ್ತಿರ ಬರುವವರೆಗೂ ಮಾತನಾಡುತ್ತಿದ್ದ ಎಂಬುದು ನಮಗೆ CPR ಮಾಡಲು ಉತ್ತೇಜಕವಾಗಿತ್ತು. ಏಕೆಂದರೆ ಆಸ್ಪತ್ರೆಯ ಆವರಣದಲ್ಲೇ ಹೃದಯ ನಿಂತುಹೋಗಿದ್ದರೆ, ಇದಾಗಿ ಎರಡು ಮೂರು ನಿಮಿಷಗಳೊಳಗೆ CPR ಶುರುಮಾಡಿದರೆ ಆತ ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ ಸುಮಾರು 45 ನಿಮಿಷ CPR ಪ್ರಯತ್ನಿಸಿದರೂ ಸಹ ಆತನ ಹೃದಯಬಡಿತ ಶುರುವಾಗಲಿಲ್ಲ. ಸಾಮಾನ್ಯವಾಗಿ 30 ನಿಮಿಷ ಹೃದಯಬಡಿತ ಬಂದಿಲ್ಲವೆಂದರೆ, ಮೆದುಳು ನಿಷ್ಕ್ರಿಯವಾಗಿದ್ದರೆ, ನಮ್ಮ ಪ್ರಯತ್ನವನ್ನು ನಿಲ್ಲಿಸುತ್ತೇವೆ. ಆದರೆ ಈತನ ವಿಷಯದಲ್ಲಿ ನಮ್ಮ ಪ್ರಯತ್ನ